ಯಾಕೆಂದರೆ ಈ ಅನಾಥಾಶ್ರಮ ಮಕ್ಕಳಿಗೇ ವಿನಃ ನಿನ್ನಂತಹ ದೊಡ್ಡವರಿಗಲ್ಲ.' ತುಸು ಧೈರ್ಯ ಬಂದಿತ್ತು ಆಕೆಗೆ.

ಹಾಗೆ ಅಲ್ಲಿ ಸೇರಿದ ಕೆಲ ದಿನಗಳಲ್ಲಿ ತುಸು ಚೇತರಿಸಿಕೊಂಡವಳೇ ಪಕ್ಕದಲ್ಲಿದ್ದ ಇವನ ಆಫೀಸಿಗೆ ಕೆಲಸ ಕೇಳಿಕೊಂಡು ಬಂದದ್ದು. ಇವ ತನ್ನ ಅಸಹಾಯಕತೆಯನ್ನು ಹೇಳಿ ಅವಳನ್ನು ತಿರುಗಿ ಕಳುಹಿಸಿದ್ದು. ಅದೇ ಇಂದು ಸಂಜೆ ಇವ ಮನೆಗೆ ಹೊರಡುವುದನ್ನೇ ಕಾದು ಇವನ ಕಾರು ಹತ್ತುವಾಗ ಇವನ ಕಾಲಿಗೆ ಬಿದ್ದದ್ದು. ಇವನೂ 'ಆಯ್ತು... ಆಫೀಸಿನಲ್ಲಿಯಂತೂ ಕೆಲಸ ಕೊಡಲಿಕ್ಕೆ ಆಗಲಿಲ್ಲ. ಮನೆಯಲ್ಲಿಯಾದರೂ ಆಗುತ್ತೇನೋ ನೋಡುವ. ಅಮ್ಮನಿಗೂ ವಯಸ್ಸಾಗುತ್ತ ಬಂದಿದೆ. ಮುಂಚಿನಂತೆ ಕೆಲಸ ಮಾಡಲಿಕ್ಕೂ ಆಗುವುದಿಲ್ಲ. ಕಾರು ಹತ್ತು' ಎಂದರೆ ಹಿಂದಿನ ಅನುಭವ ಬಹುಶಃ ಅವಳನ್ನು ಅನುಮಾನಿಸುವಂತೆ ಮಾಡಿತ್ತು. ಜೊತೆಯಲ್ಲಿಯೇ ಬಂದ ಅವನ ಜವಾನ ಶಿಫಾರಸು ಮಾಡಿದ ಮೇಲೆಯೇ ಆಕೆ ಕಾರು ಹತ್ತಿದ್ದು. ಮುಂದೆ ದಾರಿಯುದ್ದಕ್ಕೂ ಅವಳ ಕಥೆ ಕೇಳುತ್ತ ಬಂದದ್ದು.

ಎಲ್ಲವನ್ನೂ ಹೇಳಿದವ 'ಅಮ್ಮ ಅವಳನ್ನು ಕಾರು ಹತ್ತಲು ಬಿಟ್ಟದ್ದು, ಇಲ್ಲಿಗೆ ಕರೆದುಕೊಂಡು ಬಂದದ್ದು ಎಲ್ಲ ನಿನಗೆ ಒಬ್ಬಳು ಸಹಾಯಕ್ಕಾಗುತ್ತಾಳೆ ಎಂದು. ಆದರೆ ಅವಳ ಕಥೆಯನ್ನೆಲ್ಲ ಕೇಳಿ ಈಗ ನನ್ನ ಮನಸ್ಸು ಬದಲಾಯಿಸಿದ್ದೇನೆ. ಕಾಯಂ ಆಗಿ ಅವಳು ಈ ಮನೆಯಲ್ಲಿಯೇ ಇರುತ್ತಾಳೆ. ನಿನಗೆ ಸಹಾಯವನ್ನೂ ಮಾಡುತ್ತಾಳೆ. ಆದರೆ ಮನೆಯ ಕೆಲಸದವಳಾಗಿ ಅಲ್ಲ. ನಿನ್ನ ಸೊಸೆಯಾಗಿ...' ಮಗನ ನೇರ ಮತ್ತು ಸ್ಪಷ್ಟವಾದ ಮಾತಿನಲ್ಲಿನ ಖಚಿತತೆ ಆ ತಾಯಿಯನ್ನು ತಟ್ಟಿತ್ತು. ಅದಕ್ಕಿಂತ ಹೆಚ್ಚಾಗಿ ಇಷ್ಟು ಹೊತ್ತೂ ತಲೆ ತಗ್ಗಿಸಿ ಮೊಣಕಾಲುಗಳ ನಡುವೆ ಮುಖ ಹುದಗಿಸಿಕೊಂಡು ಕುಳಿತಿದ್ದ ಆ ಹುಡುಗಿ ಅವನ ಮಾತು ಕೇಳಿದ್ದೇ ಮುಖವೆತ್ತಿದ್ದನ್ನು ಮತ್ತು ಹಾಗೆ ಮುಖವೆತ್ತುವಾಗ ಆಕೆಯ ಕಣ್ಣುಗಳಲ್ಲಿ ಮಿನುಗಿದ ಕಾಂತಿಯನ್ನು ಕಂಡ ಆ ತಾಯಿ ತನ್ನ ವಯಸ್ಸನ್ನೂ ಮರೆತು ಒಂದೇ ಹಾರಿಗೆ ಹಾರಿ ಆಕೆಯನ್ನು ತಬ್ಬಿಕೊಂಡಿದ್ದಳು. ಅಮ್ಮ ಎದ್ದ ರಭಸಕ್ಕೆ ಒಮ್ಮೆ ಕಂಗಾಲಾದರೂ ಆಕೆಯ ಪ್ರೀತಿಯ ಅಪ್ಪುಗೆಯಲ್ಲಿ ಆ ಹುಡುಗಿ ಕರಗುತ್ತಿದ್ದುದನ್ನು ಕಂಡ ಆ ಮಗನಿಗೆ ಅವನ ಶಾಲೆಯ ದಿನಗಳಲ್ಲಿ ಸಹಪಾಠಿಗಳು 'ಇವನ ಅಪ್ಪ ಯಾರು' ಎಂದು ಇವನ ಕಿವಿಯ ಮೇಲೆ ಬೀಳಬೇಕಂತಲೇ ಕೇಳುತ್ತ 'ಅವನಿಗೆ ದಿನಕ್ಕೊಬ್ಬರು ಅಪ್ಪ. ಯಾರ ಹೆಸರು ಹೇಳುತ್ತಾನೆ ಅವನು' ಎಂದು ತಾವೇ ಉತ್ತರ ಕೊಟ್ಟುಕೊಳ್ಳುತ್ತ ತಮ್ಮ ತಮ್ಮೊಳಗೇ ಕಿಸಿ ಕಿಸಿ ನಗುತ್ತಿದ್ದುದು ನೆನಪಾದರೂ ಮನಸ್ಸಿಗೆ ಆಗ ಆಗುತ್ತಿದ್ದ ನೋವು ಮಾತ್ರ ಆಗಲೇ ಇಲ್ಲ. ಬದಲಿಗೆ ಅಮ್ಮ ಮತ್ತು ಆ ಹುಡುಗಿ ಇಬ್ಬರ ಕಣ್ಣುಗಳಲ್ಲಿಯೂ ಹೊಮ್ಮುತ್ತಿದ್ದ ತೃಪ್ತಿಯನ್ನು ನೋಡುತ್ತಿದ್ದವನಿಗೆ ಎಂದಿಲ್ಲದ ಆನಂದ. ತನ್ನ ಬದುಕೇ ಸಾರ್ಥಕವಾಯಿತು ಎನ್ನುವಂತಹ ಸಮಾಧಾನ!

**ಪಿ.ಪಿ. ಉಪಾಧ್ಯ**

ಭಾರತೀಯ ಜೀವ ವಿಮಾ ನಿಗಮದಲ್ಲಿ ಹಿರಿಯ ವಿಭಾಗಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಅವರ ಸುಮಾರು 100ಕ್ಕೂ ಹೆಚ್ಚು ಕತೆಗಳು ಪತ್ರಿಕೆಗಳಲ್ಲಿ ಅಚ್ಚಾಗಿವೆ. 'ಯಶೋದೆ' ಕಾದಂಬರಿ ಧಾರಾವಾಹಿಯಾಗಿ ಪ್ರಕಟಗೊಂಡಿದೆ. 'ಕಳೆದುಕೊಂಡಿದ್ದು ಮತ್ತು ಇತರ ಕತೆಗಳು' ಎಂಬ ಕಥಾಸಂಕಲನ ಪ್ರಕಟವಾಗಿದೆ. ಬೆಂಗಳೂರಿನಲ್ಲಿ ನೆಲೆಸಿದ್ದಾರೆ.